# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:21-02-2018 ರಂದು ನಡೆದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| 1) | ಸಿ.ಆರ್.ಲಕ್ಷ್ಮೀನಾರಾಯಣ್ | ಅಧ್ಯಕ್ಷರು | 1) | ಸಹಾಯಕ ಆಯುಕ್ತರು (ಆಡಳಿತ) |
| 2) | ಹೆಚ್.ಎ.ಕೆಂಪೇಗೌಡ | ಸದಸ್ಯರು | 2) | ಕೌನ್ಸಿಲ್ ಕಾರ್ಯದರ್ಶಿ |
| 3) | ಕೆ.ನರಸಿಂಹನಾಯಕ್ | ಸದಸ್ಯರು | 3) | ಆಯುಕ್ತರವರ ಕಛೇರಿ ವ್ಯವಸ್ಥಾಪಕರು ಹಾಗೂ ವಿಷಯ ನಿರ್ವಾಹಕರು |
| 4) | ಎಂ.ಮಾಲತಿ | ಸದಸ್ಯರು | | |
| 5) | ಎನ್.ಮಂಜುನಾಥ | ಸದಸ್ಯರು | | |
| 6) | ಜಿ.ಕೃಷ್ಣಮೂರ್ತಿ | ಸದಸ್ಯರು | | |
| 7) | ಸೀಮಾ ಅಲ್ತಾಫ್ ಖಾನ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

### 1) ವಿಷಯದ ಸಂಖ್ಯೆ:ಸಿಆಸುಸ್ಥಾಸ/ವಿ.ಸಂ/111/2017-18

ಆಯುಕ್ತರವರ ದಿನಾಂಕ:03-02-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 454 ಎಂಎನ್‌ಜಿ 2017, ದಿನಾಂಕ: 16-10-2017 ರಲ್ಲಿ ಲೋಕೋಪಯೋಗಿ ಇಲಾಖೆಯ ಪತ್ರ ಸಂಖ್ಯೆ:ಸಿಬಿಎಸ್/51/ಸಇಂ/ವರ್ಗ/ಇಎಸ್‌ಇ/2017-18, ದಿನಾಂಕ:14-07-2017 ರಲ್ಲಿ ಶ್ರೀ ರಾಘವೇಂದ್ರ.ಟಿ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಸಹಾಯಕ ಅಭಿಯಂತರರ ಹುದ್ದೆಗೆ ಮರು ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ.

ಶ್ರೀ ರಾಘವೇಂದ್ರ.ಟಿ., ಸಹಾಯಕ ಅಭಿಯಂತರರು ಇವರು ದಿನಾಂಕ:08-11-2017 ರಂದು ಮನವಿ ಸಲ್ಲಿಸಿ, ಪಾಲಿಕೆಯಲ್ಲಿ ಮರುಸ್ಥಳ ನಿಯುಕ್ತಿಗೊಳಿಸಲು ಕೋರಿರುತ್ತಾರೆ.

ಶ್ರೀ ರಾಘವೇಂದ್ರ.ಟಿ., ಸಹಾಯಕ ಅಭಿಯಂತರರು ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸುವ ಬಗ್ಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಅಭಿಪ್ರಾಯ ನೀಡಿರುವುದಿಲ್ಲ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರಸ್ತುತ ಪಾಲಿಕೆಯಲ್ಲಿ 361 ಸಹಾಯಕ ಅಭಿಯಂತರರ ಮಂಜೂರಾತಿ ಹುದ್ದೆಗಳಿದ್ದು, ಮಂಜೂರಾತಿ ಹುದ್ದೆಗಳಲ್ಲಿ ಶೇ.75% ರಷ್ಟು ಅಂದರೆ 271 ಹುದ್ದೆಗಳು ಲೋಕೋಪಯೋಗಿ ಇಲಾಖೆ ಮತ್ತು ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಪಡೆಯಲು ಹಾಗೂ ಶೇ.25% ಅಂದರೆ ಒಟ್ಟು 90 ಹುದ್ದೆಗಳನ್ನು ಪಾಲಿಕೆಯಲ್ಲಿ ನೇರ ನೇಮಕಾತಿ ಮತ್ತು ಹುದ್ದೆ ವರ್ಗಾವಣೆ ಮೂಲಕ ತುಂಬಲು ಅವಕಾಶವಿರುತ್ತದೆ.

ಈ ಪೈಕಿ ಪಾಲಿಕೆಯಲ್ಲಿ ಎರವಲು ಸೇವೆಗೆ ಮಂಜೂರಾಗಿರುವ 271 ಹುದ್ದೆಗಳಲ್ಲಿ 152 ಮಂದಿ ಲೋಕೋಪಯೋಗಿ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆಯ ಅಭಿಯಂತರರುಗಳಿಗೆ ಮಂಜೂರಾಗಿರುವ 90 ಹುದ್ದೆಗಳಲ್ಲಿ 72 ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಅದರಂತೆ ಎರವಲು ಸೇವೆಗೆ ಮಂಜೂರಾಗಿರುವ 271 ಹುದ್ದೆಗಳಲ್ಲಿ ಒಟ್ಟು 119 ಹುದ್ದೆಗಳು ಖಾಲಿ ಇದ್ದು ಹಾಗೂ ಪಾಲಿಕೆಗೆ ಮಂಜೂರಾಗಿರುವ 90 ಹುದ್ದೆಗಳಲ್ಲಿ ಒಟ್ಟು 18 ಹುದ್ದೆಗಳು ಖಾಲಿ ಇರುತ್ತವೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ರಾಘವೇಂದ್ರ.ಟಿ., ಸಹಾಯಕ ಅಭಿಯಂತರರು ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸಿ ಆದೇಶಿಸಿದ್ದು, ಈ ಸಂಬಂಧ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ತೀರ್ಮಾನ:** "ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ಸಹಾಯಕ ಅಭಿಯಂತರರು ನಿಯೋಜನೆಗೊಂಡಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಮಾನ್ಯ ಆಯುಕ್ತರು ರವರ ದಿನಾಂಕ:03-02-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು".

## 2) ವಿಷಯದ ಸಂಖ್ಯೆ:ಸಿಆಸುಸ್ಥಾಸ/ವಿ.ಸಂ/112/2017-18

ಆಯುಕ್ತರವರ ದಿನಾಂಕ:27-01-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 413 ಎಂಎನ್‌ಜಿ 2017, ದಿನಾಂಕ: 05-09-2017 ರಲ್ಲಿ ಶ್ರೀ ಮಹಂತೇಶ್‌ಕುಮಾರ್.ವೈ.ಎನ್., ಸಹಾಯಕ ಅಭಿಯಂತರರು,



ಅಧ್ಯಕ್ಷರು

ಲೋಕೋಪಯೋಗಿ ಇಲಾಖೆ ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಸಹಾಯಕ ಅಭಿಯಂತರರ ಹುದ್ದೆಗೆ ಮರು ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ.

ಶ್ರೀ ಮಹಂತೇಶ್‌ಕುಮಾರ್.ವೈ.ಎನ್., ಸಹಾಯಕ ಅಭಿಯಂತರರು ಇವರು ದಿನಾಂಕ:05-01-2018 ರಂದು ಪಾಲಿಕೆಯಲ್ಲಿ ಮನವಿ ಸಲ್ಲಿಸಿ ಮರುಸ್ಥಳ ನಿಯುಕ್ತಿಗೊಳಿಸಲು ಕೋರಿರುತ್ತಾರೆ.

ಶ್ರೀ ಮಹಂತೇಶ್‌ಕುಮಾರ್.ವೈ.ಎನ್., ಸಹಾಯಕ ಅಭಿಯಂತರರು ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸುವ ಬಗ್ಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಅಭಿಪ್ರಾಯ ನೀಡಿರುವುದಿಲ್ಲ.

ಪ್ರಸ್ತುತ ಪಾಲಿಕೆಯಲ್ಲಿ 361 ಸಹಾಯಕ ಅಭಿಯಂತರರ ಮಂಜೂರಾತಿ ಹುದ್ದೆಗಳಿದ್ದು, ಮಂಜೂರಾತಿ ಹುದ್ದೆಗಳಲ್ಲಿ ಶೇ.75% ರಷ್ಟು ಅಂದರೆ 271 ಹುದ್ದೆಗಳು ಲೋಕೋಪಯೋಗಿ ಇಲಾಖೆ ಮತ್ತು ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಪಡೆಯಲು ಹಾಗೂ ಶೇ.25% ಅಂದರೆ ಒಟ್ಟು 90 ಹುದ್ದೆಗಳನ್ನು ಪಾಲಿಕೆಯಲ್ಲಿ ನೇರ ನೇಮಕಾತಿ ಮತ್ತು ಹುದ್ದೆ ವರ್ಗಾವಣೆ ಮೂಲಕ ತುಂಬಲು ಅವಕಾಶವಿರುತ್ತದೆ.

ಈ ಪೈಕಿ ಪಾಲಿಕೆಯಲ್ಲಿ ಎರವಲು ಸೇವೆಗೆ ಮಂಜೂರಾಗಿರುವ 271 ಹುದ್ದೆಗಳಲ್ಲಿ 152 ಮಂದಿ ಲೋಕೋಪಯೋಗಿ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆಯ ಅಭಿಯಂತರರುಗಳಿಗೆ ಮಂಜೂರಾಗಿರುವ 90 ಹುದ್ದೆಗಳಲ್ಲಿ 72 ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಅದರಂತೆ ಎರವಲು ಸೇವೆಗೆ ಮಂಜೂರಾಗಿರುವ 271 ಹುದ್ದೆಗಳಲ್ಲಿ ಒಟ್ಟು 119 ಹುದ್ದೆಗಳು ಖಾಲಿ ಇದ್ದು ಹಾಗೂ ಪಾಲಿಕೆಗೆ ಮಂಜೂರಾಗಿರುವ 90 ಹುದ್ದೆಗಳಲ್ಲಿ ಒಟ್ಟು 18 ಹುದ್ದೆಗಳು ಖಾಲಿ ಇರುತ್ತವೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ಮಹಂತೇಶ್‌ಕುಮಾರ್.ವೈ.ಎನ್., ಸಹಾಯಕ ಅಭಿಯಂತರರು ಇವರನ್ನು ಪಾಲಿಕೆಗೆ ನಿಯೋಜಿಸಿರುವ ಸಂಬಂಧ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>ತೀರ್ಮಾನ:</u> **"ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ಸಹಾಯಕ ಅಭಿಯಂತರರು ನಿಯೋಜನೆಗೊಂಡಿರುವ ಬಗ್ಗೆ**

ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಮಾನ್ಯ ಆಯುಕ್ತರು ರವರ ದಿನಾಂಕ:27-01-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು".

## 3) ವಿಷಯದ ಸಂಖ್ಯೆ:ಸಿಆಸುಸ್ಥಾಸ/ ವಿ.ಸಂ/ 113/ 2017-18

ಆಯುಕ್ತರವರ ದಿನಾಂಕ:27-01-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 561 ಎಂಎನ್‌ಯು 2017, ದಿನಾಂಕ: 06-12-2017 ರಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಸೂಚನೆ ಸಂಖ್ಯೆ:ಲೋಇ 369 ಸೇಸಎ 2017, ದಿನಾಂಕ:23-10-2017 ರಲ್ಲಿ ಶ್ರೀ ಅಶೋಕ್.ಎಸ್.ಪಾಟೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಲಾಗಿರುವುದರಿಂದ ಶ್ರೀ ಅಶೋಕ್ ಎಸ್.ಪಾಟೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರನ್ನು ಪಾಲಿಕೆಯಲ್ಲಿ ನಿಯೋಜನಾ ಅವಧಿ ಮುಗಿದಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಬಿಡುಗಡೆಗೊಳಿಸುವ ಷರತ್ತಿನ ಮೇಲೆ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಎರವಲು ಸೇವೆಯ ಮೇಲೆ ಪಾಲಿಕೆಗೆ ಸ್ಥಳನಿಯುಕ್ತಿಗೊಳಿಸಲು ಆದೇಶಿಸಲಾಗಿರುತ್ತದೆ.

ಅದರಂತೆ, ಶ್ರೀ ಅಶೋಕ್.ಎಸ್.ಪಾಟೀಲ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ದಿನಾಂಕ:27-12-2017 ರಂದು ಮನವಿ ಪತ್ರ ಸಲ್ಲಿಸಿ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಂತೆ ಪಾಲಿಕೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗೆ ಮರು ಸ್ಥಳನಿಯುಕ್ತಿಗೊಳಿಸಬೇಕೆಂದು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 118 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮಂಜೂರಾತಿ ಹುದ್ದೆಗಳಿದ್ದು, ಮಂಜೂರಾತಿ ಹುದ್ದೆಗಳಲ್ಲಿ ಶೇ.25% ರಷ್ಟು ಅಂದರೆ 30 ಹುದ್ದೆಗಳು ಲೋಕೋಪಯೋಗಿ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಪಡೆಯಲು ಹಾಗೂ ಶೇ.75% ಅಂದರೆ ಒಟ್ಟು 88 ಹುದ್ದೆಗಳನ್ನು ಪಾಲಿಕೆಯಲ್ಲಿ ನೇರ ನೇಮಕಾತಿ ಮತ್ತು ಹುದ್ದೆ ವರ್ಗಾವಣೆ ಮೂಲಕ ತುಂಬಲು ಅವಕಾಶವಿರುತ್ತದೆ.

ಪ್ರಸ್ತುತ ಪಾಲಿಕೆಯಲ್ಲಿ ಎರವಲು ಸೇವೆಗೆ ಮಂಜೂರಾಗಿರುವ 30 ಹುದ್ದೆಗಳಲ್ಲಿ 139 ಮಂದಿ ಲೋಕೋಪಯೋಗಿ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ

ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆಯ ಅಭಿಯಂತರರುಗಳಿಗೆ ಮಂಜೂರಾಗಿರುವ 88 ಹುದ್ದೆಗಳಲ್ಲಿ 85 ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಅದರಂತೆ ಎರವಲು ಸೇವೆಗೆ ಮಂಜೂರಾಗಿರುವ 30 ಹುದ್ದೆಗಳಲ್ಲಿ ಒಟ್ಟು 109 ಹುದ್ದೆಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿಯೋಜನೆಗೊಳ್ಳುವ ಅಭಿಯಂತರರುಗಳನ್ನು ಕರ್ತವ್ಯದ ಮೇಲೆ ತೆಗೆದುಕೊಂಡು, ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಭಿಯಂತರರುಗಳ ಪೈಕಿ ಜೇಷ್ಠತೆಯಲ್ಲಿ ಹಿರಿಯರಾದ ಅಂದರೆ 3 ವರ್ಷಗಳಿಗೂ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಅಭಿಯಂತರರುಗಳನ್ನು ಮಾತ್ರ ಇಲಾಖೆಗೆ ಹಿಂದಿರುಗಿಸಲಾಗುತ್ತಿರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ಅಶೋಕ್.ಎಸ್.ಪಾಟೀಲ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸಿರುವ ಬಗ್ಗೆ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ತೀರ್ಮಾನ:** "ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ನಿಯೋಜನೆಗೊಂಡಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಪಾಲಿಕೆಯಲ್ಲಿ ದೀರ್ಘಾವಧಿಯಿಂದ ಸೇವೆ ಸಲ್ಲಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರೊಬ್ಬರನ್ನು ಮಾತ್ರ ಇಲಾಖೆಗೆ ಹಿಂದಿರುಗಿಸುವ ಷರತ್ತಿಗೊಳಪಟ್ಟು ಮಾನ್ಯ ಆಯುಕ್ತರು ರವರ ದಿನಾಂಕ:27-01-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು".

## 4) ವಿಷಯದ ಸಂಖ್ಯೆ:ಸಿಆಸುಸ್ಥಾಸ/ವಿ.ಸಂ/115/2017-18

ಆಯುಕ್ತರವರ ದಿನಾಂಕ:06-02-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 658 ಎಂಎನ್‌ಯು 2017, ದಿನಾಂಕ: 18-01-2018 ರಲ್ಲಿ ಶ್ರೀ ಪ್ರಮೋದ್‌ಕುಮಾರ್.ಎನ್.ಜಿ. ಹಿರಿಯ ಉಪ ನಿರ್ದೇಶಕರು (ಸಹಾಯಕ ಕಾರ್ಯಪಾಲಕ ಅಭಿಯಂತರರು) ಕೆ.ಎಂ.ಎಫ್. ಇವರನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ

ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ ರವರ ಪ್ರಸ್ತಾವನೆ ಸಂಖ್ಯೆ:1759/ಆಡಳಿತ-4/2017, ದಿನಾಂಕ:20-12-2017 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿಯೋಜಿಸಲು ಸಹಮತಿಯನ್ನು ನೀಡಿರುತ್ತಾರೆ.

ಶ್ರೀ ಪ್ರಮೋದ್‌ಕುಮಾರ್.ಎನ್.ಜಿ. ಹಿರಿಯ ಉಪ ನಿರ್ದೇಶಕರು ಕೆ.ಎಂ.ಎಫ್. ಇವರನ್ನು ಪಾಲಿಕೆಯಲ್ಲಿ ದೀರ್ಘಾವಧಿಯಿಂದ ಸೇವೆ ಸಲ್ಲಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಷರತ್ತಿನ ಮೇಲೆ ಈ ಕೂಡಲೇ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಎರವಲು ಸೇವೆಯ ಮೇಲೆ ಪಾಲಿಕೆಗೆ ಮರು ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ.

ಅದರಂತೆ, ಶ್ರೀ ಪ್ರಮೋದ್‌ಕುಮಾರ್.ಎನ್.ಜಿ. ಹಿರಿಯ ಉಪ ನಿರ್ದೇಶಕರು (ಸಹಾಯಕ ಕಾರ್ಯಪಾಲಕ ಅಭಿಯಂತರರು) ಕೆ.ಎಂ.ಎಫ್. ಇವರು ದಿನಾಂಕ:19-01-2018 ರಂದು ಮನವಿ ಪತ್ರ ಸಲ್ಲಿಸಿ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಂತೆ ಪಾಲಿಕೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗೆ ಮರು ಸ್ಥಳನಿಯುಕ್ತಿಗೊಳಿಸಬೇಕೆಂದು ಕೋರಿರುತ್ತಾರೆ.

ಶ್ರೀ ಪ್ರಮೋದ್‌ಕುಮಾರ್.ಎನ್.ಜಿ. ಹಿರಿಯ ಉಪ ನಿರ್ದೇಶಕರು (ಸಹಾಯಕ ಕಾರ್ಯಪಾಲಕ ಅಭಿಯಂತರರು) ಕೆ.ಎಂ.ಎಫ್. ಇವರನ್ನು ಎರವಲು ಸೇವೆಯ ಮೇಲೆ ನಿಯೋಜಿಸಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಅಭಿಪ್ರಾಯ ವರದಿಯನ್ನು ಸಲ್ಲಿಸಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 118 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮಂಜೂರಾತಿ ಹುದ್ದೆಗಳಿದ್ದು, ಮಂಜೂರಾತಿ ಹುದ್ದೆಗಳಲ್ಲಿ ಶೇ.25% ರಷ್ಟು ಅಂದರೆ 30 ಹುದ್ದೆಗಳು ಲೋಕೋಪಯೋಗಿ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಪಡೆಯಲು ಹಾಗೂ ಶೇ.75% ಅಂದರೆ ಒಟ್ಟು 88 ಹುದ್ದೆಗಳನ್ನು ಪಾಲಿಕೆಯಲ್ಲಿ ನೇರ ನೇಮಕಾತಿ ಮತ್ತು ಹುದ್ದೆ ವರ್ಗಾವಣೆ ಮೂಲಕ ತುಂಬಲು ಅವಕಾಶವಿರುತ್ತದೆ.

ಪ್ರಸ್ತುತ ಪಾಲಿಕೆಯಲ್ಲಿ ಎರವಲು ಸೇವೆಗೆ ಮಂಜೂರಾಗಿರುವ 30 ಹುದ್ದೆಗಳಲ್ಲಿ 142 ಮಂದಿ ಲೋಕೋಪಯೋಗಿ ಇಲಾಖೆ ಮತ್ತು ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆಯ ಅಭಿಯಂತರರುಗಳಿಗೆ ಮಂಜೂರಾಗಿರುವ 88 ಹುದ್ದೆಗಳಲ್ಲಿ 85

ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಅದರಂತೆ ಎರವಲು ಸೇವೆಗೆ ಮಂಜೂರಾಗಿರುವ 30 ಹುದ್ದೆಗಳಲ್ಲಿ ಒಟ್ಟು 112 ಹುದ್ದೆಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ಪ್ರಮೋದ್ ಕುಮಾರ್.ಎನ್.ಜಿ. ಹಿರಿಯ ಉಪ ನಿರ್ದೇಶಕರು (ಸಹಾಯಕ ಕಾರ್ಯಪಾಲಕ ಅಭಿಯಂತರರು) ಕೆ.ಎಂ.ಎಫ್. ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸಿರುವ ಬಗ್ಗೆ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ತೀರ್ಮಾನ:** "ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ಹಿರಿಯ ಉಪ ನಿರ್ದೇಶಕರು (ಸಹಾಯಕ ಕಾರ್ಯಪಾಲಕ ಅಭಿಯಂತರರು) ರವರು ನಿಯೋಜನೆಗೊಂಡಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಪಾಲಿಕೆಯಲ್ಲಿ ದೀರ್ಘಾವಧಿಯಿಂದ ಸೇವೆ ಸಲ್ಲಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರೊಬ್ಬರನ್ನು ಮಾತ್ರ ಇಲಾಖೆಗೆ ಹಿಂದಿರುಗಿಸುವ ಷರತ್ತಿಗೊಳಪಟ್ಟು ಮಾನ್ಯ ಆಯುಕ್ತರು ರವರ ದಿನಾಂಕ: 06-02-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು".

**(ಸಿ.ಆರ್.ಲಕ್ಷ್ಮೀನಾರಾಯಣ್)**
**ಅಧ್ಯಕ್ಷರು**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ.ಎಸ್ ಪಕ್ಷದ ನಾಯಕರ ಅವಗಾಹನೆಗೆ ಕಳುಹಿಸಿದೆ.
5. ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
6. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ಕಳುಹಿಸಿದೆ.
7. ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
8. ಉಪ ಆಯುಕ್ತರು (ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಆಯುಕ್ತರು (ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಸಮಿತಿಯ ನಡವಳಿಯನ್ನು ಪಾಲಿಕೆಯ ಅಂತರ್ಜಾಲದಲ್ಲಿ ಪ್ರಚುರಪಡಿಸಲು ಕೋರಿದೆ..
11. ಕೌನ್ಸಿಲ್ ಕಾರ್ಯಾಲಯಕ್ಕೆ ಕಳುಹಿಸಿದೆ.
12. ಕಛೇರಿ ಪ್ರತಿ

ಅಧ್ಯಕ್ಷರು
...ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
...ಬೆಂಗಳೂರು ನಗರ ಪಾಲಿಕೆ.